ಹೊರಗೆ ರಾತ್ರಿಯ ಅಂಧಕಾರ ಕವಿದಿತ್ತು. ಆಶ್ರಮದ ವೃಕ್ಷಗಳಲ್ಲಿದ್ದ ಪಕ್ಷಿಗಳು ಆಗಾಗ ರೆಕ್ಕೆ ಬಡಿದು ಸದ್ದು ಮಾಡುತ್ತಿದ್ದವು.

ಮಣಿಲಾಲ ಶೀಘ್ರವೇ ಕೋಣೆಯನ್ನು ಪ್ರವೇಶಿಸಿದ. ಅವನು ಬಾಪೂ ಅವರ ಚರಣಗಳ ಬಳಿ ಕತ್ತರಿಯನ್ನಿಟ್ಟು ನಿಂತ. ಬಾಪೂ ಕತ್ತರಿಯನ್ನು ತೆಗೆದುಕೊಂಡರು. ಅವರ ಕೈಗಳು ಕಂಪಿಸುತ್ತಿದ್ದವು. ಅವರ ಕೈಗಳ ರೋಮರೋಮಗಳು ಮರುಗಿದವು. ಮಣಿಲಾಲ ಕೊನೆಯ ಬಾರಿಗೆ ತೀವ್ರ ವೇದನೆ ಮತ್ತು ಅಸಹ್ಯ ಅಪರಾಧ ಭಾವನೆಯಿಂದ ಲಲಿತಾ ಮತ್ತು ಚಂದಾಳನ್ನು ನೋಡಿದ, ನಂತರ ಅವರ ಅತ್ಯಂತ ಆಕರ್ಷಕ, ಶ್ಯಾಮಲ ವರ್ಣದ ಕೇಶರಾಶಿಯನ್ನು ನೋಡಿದ. ಕಡೆಗೆ ಅಲ್ಲಿಂದ ಚೇಳು ಕುಟುಕಿದಂತೆ ವೇಗವಾಗಿ ಹೊರಗೆ ಹೊರಟು ಹೋದ.

* * *

ಅಹಮದಾಬಾದ್‌ನಲ್ಲಿದ್ದ ಹರಿಲಾಲನಿಗೆ ಈ ಘಟನೆಯ ಬಗ್ಗೆ ತಿಳಿದಾಗ ಅವನ ಆತ್ಮದಲ್ಲಿ ಹಾಹಾಕಾರವುಂಟಾಯಿತು. ಬೋಳು ತಲೆಯ ಲಲಿತಾ ಮತ್ತು ಚಂದಾಳ ಮುಖವನ್ನು ಕಲ್ಪಿಸಿಕೊಂಡಾಗ ಅವನು ಆಪಾದಮಸ್ತಕ ಕಂಪಿಸಿದ. ಮಣಿಲಾಲನ ವರ್ತನೆಯ ಬಗ್ಗೆ ಅವನಿಗೆ ಯಾವುದೇ ದೂರಿರಲಿಲ್ಲ, ಆದರೆ ಈ ವಿಷಯದಲ್ಲಿ ಬಾಪೂ ಅವರು ಅಷ್ಟೇಕೆ ರಂಪಾಟ ಮಾಡಿದರು ಎಂಬುದನ್ನು ಹರಿಲಾಲ ಅರ್ಥ ಮಾಡಿಕೊಳ್ಳದಾದ.

ಹದಿಮೂರನೆಯ ವಯಸ್ಸಿಗೆ ಬಾಪೂ ಅವರ ವಿವಾಹವಾಗಿತ್ತು... ಹದಿನೇಳನೆಯ ವಯಸ್ಸಿಗೆ ಹರಿಲಾಲ ವಿವಾಹವನ್ನು ಮಾಡಿಕೊಂಡಿರಲಿಲ್ಲವೇ? ಈಗ ಮಣಿಲಾಲ ಇಪ್ಪತ್ತನೆಯ ವಯಸ್ಸಿಗೆ ಕಾಲಿಟ್ಟಿದ್ದ. ಈ ವಯಸ್ಸಿನಲ್ಲಿ ಅವನಿಂದ ಅಲ್ಪಸ್ವಲ್ಪ ತಪ್ಪಾಗಿದ್ದಕ್ಕೆ, ಅದಕ್ಕೆ ಇಷ್ಟು ಭಯಾನಕ ರೂಪವನ್ನು ಕೊಟ್ಟು ವಿಷಯವನ್ನು ಸಾರ್ವತ್ರೀಕರಣಗೊಳಿಸುವಂಥ ಅಗತ್ಯವೇನಿತ್ತು? ಒಂದು ಬಾರಿ ಬಾಪೂ ಉಪವಾಸಕ್ಕೆ ಕೂತರೆ, ಆಶ್ರಮ ಮಾತ್ರವಲ್ಲ, ಇಡೀ ದಕ್ಷಿಣ ಆಫ್ರಿಕಾದ ಹಿಂದೂಸ್ತಾನಿ ಜನರಿಗೆ ಈ ವಿಷಯ ತಿಳಿಯುವುದು. ಈ ನಡುವೆ ಮಣಿಲಾಲನ ಜೀವನ ಅದೆಷ್ಟು ಅಸಹ್ಯವಾಗಿರಬಹುದು. ಇದನ್ನು ಯೋಚಿಸಿ, ಹರಿಲಾಲನ ಮನಸ್ಸು ವ್ಯಗ್ರಗೊಂಡಿತು. ಅವನ ಮನಸ್ಸಿನಲ್ಲಿ ಬೇಸರ ಮನೆ ಮಾಡಿತು.

ಎರಡನೆಯ ಬಾರಿಗೆ ಬಾಪೂ ಅವರ ಬಳಿಗೆ ಆಫ್ರಿಕಾಕ್ಕೆ ಹೋಗುವ ಬಗ್ಗೆ ಅವನ ಮನಸ್ಸಿನಲ್ಲಿ ಹೊಯ್ದಾಟ ನಡೆಯುತ್ತಿತ್ತು, ಈ ಘಟನೆಯಿಂದಾಗಿ ಆ ಹೊಯ್ದಾಟಕ್ಕೆ ತೀವ್ರ ವೇಗ ಸಿಕ್ಕಿತು. ಅವನು ಆಫ್ರಿಕಾದಲ್ಲಿ ಎಲ್ಲಾ ವಿದ್ಯಾವಂತರ ನಡುವೆ ಅಶಿಕ್ಷಿತನಂತಿದ್ದ... ಬಡಪಾಯಿ ಬಾ ಸಹ ಬಾಪೂ ಅವರು ಹೇಳಿದಂತೆ ಕೇಳದಿದ್ದರೆ, ಬಾಪೂ ಅವರನ್ನೇನು ಮಾಡುತ್ತಿದ್ದರೋ...

ಈಗ ಮಣಿಲಾಲನಿಗೆ ಈ ಪರಿಸ್ಥಿತಿ ಬಂತೆ?

ಒಂದು ವೇಳೆ ತಾನು ಆಫ್ರಿಕಾಕ್ಕೆ ಹೋದರೂ ಸಹ ಇಂದಿನ ಪರಿಸ್ಥಿತಿಯಲ್ಲಿ ಸುಧಾರಣೆ ಹೇಗಾಗುವುದು? ಇದುವರೆಗೆ ಇಲ್ಲಿ ಗುಲಾಬ ಮತ್ತು ಮಕ್ಕಳನ್ನು ಯೋಗ್ಯ ರೀತಿಯಲ್ಲಿ ನೋಡಿಕೊಳ್ಳುವಂಥ ವ್ಯವಸ್ಥೆ ಇರುವುದು ಸರಿಯೇ, ಆದರೆ ಆಫ್ರಿಕಾದಲ್ಲಿ ಬಾಪೂ ಅವರು ತನ್ನನ್ನು ಇಂಥ ಯಾವ ಕೆಲಸಗಳಿಗೆ ನೇಮಿಸುವರೋ...

ಅನಿಶ್ಚಿತತೆಯ ಪರಿಸ್ಥಿತಿಯಲ್ಲಿ, ಆ ದಿನಗಳಲ್ಲಿ ಹರಿಲಾಲನ ಪತ್ರಕ್ಕೆ ಬಾಪೂ ಅವರು ಕೊಟ್ಟ ಉತ್ತರದಿಂದ ಹರಿಲಾಲ ಒಂದು ನಿರ್ಧಾರಕ್ಕೆ ಬಂದ

'ಇಲ್ಲ, ತಾನು ಯಾವುದೇ ಪರಿಸ್ಥಿತಿಯಲ್ಲಿ ಆಫ್ರಿಕಾಕ್ಕೆ ಹೋಗುವುದಿಲ್ಲ.'

ಬಾಪೂ ಹರಿಲಾಲನಿಗೆ ಪತ್ರವನ್ನು ಬರೆದಿದ್ದರು

'ಹರಿಲಾಲ! ಒಂದು ವೇಳೆ ನೀನು ಪರೀಕ್ಷೆಯ ವ್ಯಾಮೋಹವನ್ನು ಬಿಡಲು ಸಾಧ್ಯವಾದರೆ ಹಾಗೂ ನಿನಗೆ ಜೈಲಿಗೆ ಹೋಗುವುದು ಒಳಿತೆಂದು ಕಂಡು ಬಂದರೆ, ನೀನು ಚಂಚಿಯೊಂದಿಗೆ ಇಲ್ಲಿಗೆ ಬಾ. ನೀನು ನಿನ್ನ ಕಾಲುಗಳ ಮೇಲೆ ನಿಲ್ಲುವವರೆಗೆ ನೀನು ಚಂಚಿಯ ಮೋಹವನ್ನು ತ್ಯಜಿಸಬೇಕು ಎಂಬುದು ನನ್ನ ಸಲಹೆಯಾಗಿದೆ. ನೀನು ಮತ್ತೊಮ್ಮೆ ಲೌಕಿಕ ದೋಷದ ಸುಳಿಯಲ್ಲಿ ಸಿಲುಕಿದ ವಿಷಯ ಸಹ ತಿಳಿಯಿತು. ನೀನಿಲ್ಲಿಗೆ ಬರುವ ವಿಷಯದಲ್ಲಿ ಸತ್ಯಾಂಶವಿಲ್ಲವೆಂದು ನನಗೆ ಅನ್ನಿಸುತ್ತದೆ.'

ಹರಿಲಾಲ ಪದೇಪದೇ ಬಾಪೂ ಅವರ ಪತ್ರವನ್ನು ಓದಿದ. ಗುಲಾಬಳ ಗರ್ಭದಲ್ಲಿ ಬೆಳೆಯುತ್ತಿರುವ ಮೂರನೆಯ ಮಗುವಿನ ಕಡೆಗೆ ಬೆರಳು ಮಾಡಿ ಬಾಪೂ ಹೀಗೆ ಬರೆದಿದ್ದಾರೆಂದು ಅವನು ತಿಳಿದಿದ್ದ. ಬಾಪೂ ಅವರು ಮಣಿಲಾಲನಿಗೆ ಯಾವ ಶಿಕ್ಷೆಯನ್ನು ವಿಧಿಸಿದ್ದರೋ, ಅಂಥದ್ದೇ ವ್ಯವಹಾರವನ್ನು ಬಾಪೂ ತನ್ನ ಬಗ್ಗೆಯೂ ಅಪೇಕ್ಷಿಸಿದರೆ...

ತಾನು ಬಾಪೂ ಅವರು ನಿರ್ಧರಿಸಿದ ಮಾರ್ಗದಲ್ಲಿ ಸಾಗಲಾರೆ ಎಂದು ಹರಿಲಾಲನಿಗೆ ಅನ್ನಿಸಿತು. ಬಾಪೂ ಅವರ ಮಾರ್ಗ ತನ್ನ ಮಾರ್ಗವಲ್ಲ. ತಾನು ಬದುಕಬೇಕು, ಹೆಂಡತಿಯೊಂದಿಗೆ ಬದುಕಬೇಕು, ತಾನಂತೂ ವಿದ್ಯಾಭ್ಯಾಸವನ್ನು ಪೂರ್ಣ ಮಾಡದಾದೆ, ಆದರೆ ತಾನು ತನ್ನ ಮಕ್ಕಳಿಗೆ ಶಿಕ್ಷಣವನ್ನು ಕೊಡಬೇಕು, ಇದನ್ನೆಲ್ಲಾ ಮಾಡಲು ತಾನು ಹಣವನ್ನು ಸಂಪಾದನೆ ಮಾಡಬೇಕು. ಬಾಪೂ ಅವರು ಎಲ್ಲವನ್ನೂ ತ್ಯಾಜ್ಯದ ದೃಷ್ಟಿಯಲ್ಲಿ ನೋಡುತ್ತಾರೆ, ಆದರೆ ಹರಿಲಾಲ ಈ ಎಲ್ಲಾ ಪ್ರಾಪಂಚಿಕ ವಸ್ತುಗಳನ್ನು ತ್ಯಾಜ್ಯವೆಂದು ಒಪ್ಪಲು ಸಿದ್ಧನಿಲ್ಲ.

## ಹತ್ತೊಂಬತ್ತು

ಹಿಂದೂಸ್ತಾನದಿಂದ ಬಾಪೂ ಅವರಿಗೆ ಬರುವ ಪತ್ರಗಳಲ್ಲಿ ಸಾಮಾನ್ಯವಾಗಿ ಅವರಿಗೆ ಹರಿಲಾಲನ ಸುದ್ದಿ ಲಭಿಸುತ್ತಿತ್ತು. ಹರಿಲಾಲ ಬಾಪೂ ಅವರಿಗೆ ಆಗೊಂದು ಈಗೊಂದು ಪತ್ರವನ್ನು ಬರೆಯುತ್ತಿದ್ದ, ಆದರೆ ಗುಲಾಬ ಆಗಾಗ ಬಾ ಮತ್ತು ಬಾಪೂ ಅವರಿಗೆ ಪತ್ರಗಳನ್ನು ಬರೆಯುತ್ತಿದ್ದಳು. ಹರಿಲಾಲನ ಹಿಂದಿನ ಪತ್ರ ಬಂದ ನಂತರ ಹಾಗೂ ಗುಲಾಬ, ಬಾ ಅವರಿಗೆ ತಾನು ಗರ್ಭಿಣಿಯಾಗಿರುವ ಸುದ್ದಿಯನ್ನು ತಿಳಿಸುವುದಕ್ಕೂ ಮೊದಲೇ ಬಾಪೂ ಅವರಿಗೆ ಹರಿಲಾಲನ ಚಟುವಟಿಕೆಗಳು ಮತ್ತು ಅವನ ವಿಫಲತೆಯ ಪೂರ್ಣ ಸುದ್ದಿ ಲಭಿಸಿದ್ದವು.

ಇದನ್ನೆಲ್ಲಾ ತಿಳಿದ ಬಾಪೂ ತುಂಬಾ ಚಿಂತಿತರಾಗಿದ್ದರು. ಈ ವ್ಯಥೆ ಮತ್ತು ವ್ಯಗ್ರತೆಯ ನಡುವೆ ಆಫ್ರಿಕಾದ ಹೋರಾಟ ಜೀವನ್ಮರಣದ ಕೊನೆಯ ಹಂತಕ್ಕೆ ತಲುಪಿತ್ತು. ಒಮ್ಮೆ ಕಾರಾವಾಸದಲ್ಲಿದ್ದರೆ, ಇನ್ನೊಮ್ಮೆ ಆಶ್ರಮದ ಅಲುಗಿನ ಕತ್ತಿಯ ಮೇಲೆ ನಡೆಯುತ್ತಿದ್ದ ಬಾಪೂ ಅವರಿಗೆ ಲೇಶಮಾತ್ರವೂ ಬಿಡುವು ಸಿಗುತ್ತಿರಲಿಲ್ಲ. ಸಾವಿರಾರು ಸತ್ಯಾಗ್ರಹಿಗಳು ಕಾರಾವಾಸವನ್ನು ಸ್ವೀಕರಿಸಿದ್ದರು. ಅವರ ಪರಿವಾರದವರ ಪಾಲನೆ ಪೋಷಣೆಯ ಜವಾಬ್ದಾರಿ ಬಾಪೂ ಅವರ ಹೆಗಲ ಮೇಲೆ ಬಿದ್ದಿತ್ತು. ನೂರಾರು ಪರಿವಾರಗಳು ವಾಸಕ್ಕಾಗಿ ಟಾಲ್‌ಸ್ಟಾಯ್ ಆಶ್ರಮಕ್ಕೆ ಬಂದಿದ್ದರು; ಅವರ ವಸತಿ ಆಹಾರಕ್ಕೆ ಸಂಬಂಧಿಸಿದಂತೆ ನಿತ್ಯ ಅನೇಕ ಸಮಸ್ಯೆಗಳು ಉದ್ಭವಿಸುತ್ತಿದ್ದವು.

ಹರಿಲಾಲ ಇದುವರೆಗೆ ಆರ್ಥಿಕವಾಗಿ ಸ್ವಂತ ಕಾಲ ಮೇಲೆ ನಿಲ್ಲಲು ಸಾಧ್ಯವಾಗಿರಲಿಲ್ಲ. ಅಲ್ಲದೆ ಮೆಟ್ರಿಕ್ ಪರೀಕ್ಷೆಯಲ್ಲಿ ಸಹ ಅನುತ್ತೀರ್ಣನಾಗಿದ್ದ, ಇದನ್ನು ತಿಳಿದ ಬಾಪೂ ಅವರ ಮನಸ್ಸು ಉದ್ವಿಗ್ನಗೊಂಡಿತ್ತು. ತನಗೆ ಇಷ್ಟೆಲ್ಲಾ ಕೊರತೆ ಇದ್ದಾಗ್ಯೂ ಹರಿಲಾಲ ತನ್ನ ಕುಟುಂಬದ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾನೆ ಎಂಬುದನ್ನು ತಿಳಿದು ಬಾಪೂ ಅವರು ಸ್ವಲ್ಪ ಹತಾಶರಾಗಿದ್ದರು. ಗುಲಾಬ, ರಾಮಿ ಮತ್ತು ಕಾಂತಿ ಸುಖವಾಗಿರಲೆಂದು ಬಾಪೂ ಅವರು ಮುಂಬೈಯ ರೇವಾಶಂಕರ್ ಅವರಿಗೆ, ಹರಿಲಾಲನಿಗೆ ಅಗತ್ಯವಾದ ಸಹಾಯ ಮಾಡುವಂತೆ ಪತ್ರವನ್ನು ಬರೆದಿದ್ದರು; ಈ ಕಾರಣದಿಂದ ರೇವಾಶಂಕರ್ ಅವರು ಹರಿಲಾಲನಿಗೆ ಜೀವನ ಸಾಗಿಸುವಷ್ಟು ಹಣವನ್ನು ಸಹ ಕೊಡುತ್ತಿದ್ದರು. ಈ ವ್ಯವಸ್ಥೆಯನ್ನು ಖಾಯಂ ಎಂದು ಹೇಳುವಂತಿರಲಿಲ್ಲ. ಹರಿಲಾಲ ಸ್ವತಃ ಏನನ್ನೂ ಸಂಪಾದನೆ ಮಾಡುತ್ತಿರಲಿಲ್ಲ, ಅಲ್ಲದೆ ಪರಿವಾರವೂ ಬೆಳೆಯುತ್ತಿತ್ತು. ಇದನ್ನು ಬಾಪೂ ಅವರು ಅನುಚಿತ ಮಾತ್ರವಲ್ಲ, ಅನೈತಿಕ ಎಂದೂ ತಿಳಿಯುತ್ತಿದ್ದರು.

ಇಂಥ ಪರಿಸ್ಥಿತಿಯಲ್ಲಿ ಹರಿಲಾಲ ಮರಳಿ ಆಫ್ರಿಕಾಕ್ಕೆ ಬರಲು ಅನುಮತಿಗಾಗಿ ಪತ್ರವನ್ನು ಬರೆದಿದ್ದ, ಈ ವಿಷಯ ತಿಳಿದು ಬಾಪೂ ಅವರಿಗೆ ಅಲ್ಪಸ್ವಲ್ಪ ಸಂತಸದೊಂದಿಗೆ ದುಃಖವೂ ಆಗಿತ್ತು, ಅಲ್ಲದೆ ಹತಾಶರೂ ಆಗಿದ್ದರು. ಈಗ ಹೋರಾಟ ತನ್ನ ಅಂತಿಮ ಹಂತದಲ್ಲಿತ್ತು. ಹರಿಲಾಲ ಇಲ್ಲಿಗೆ ಬರುವುದಕ್ಕೂ ಮೊದಲೇ ಎಲ್ಲರೂ ಮರಳಿ ಹೋಗುವ ಸಾಧ್ಯತೆ ಇತ್ತು. ಹೀಗೇನಾದರೂ ಆದರೆ ಹರಿಲಾಲ ಇಲ್ಲಿಗೆ ಬರುವುದು ವ್ಯರ್ಥವಾಗುವುದು. ಬಾಪೂ ಅವರು ಸಹ, ಇಲ್ಲಿಯ ಹೋರಾಟ ಮುಗಿದ ಕೂಡಲೇ ಹಿಂದೂಸ್ತಾನಕ್ಕೆ ಮರಳಿ ಹೋಗಲು ನಿರ್ಣಯಿಸಿದ್ದರು.

ಹರಿಲಾಲ ತನ್ನ ಪತ್ನಿಯೊಂದಿಗಿನ ಸಹವಾಸದ ಕಾಮನೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲೇಬೇಕು ಎಂದು ಸಹ ಬಾಪೂ ತಿಳಿದಿದ್ದರು. ಇವೆಲ್ಲವನ್ನು ಹೊರತುಪಡಿಸಿ ಒಂದು ವೇಳೆ ಹರಿಲಾಲ ವಾಸ್ತವವಾಗಿಯೂ ಅವರೊಂದಿಗಿರಲು ಒಪ್ಪಿದರೆ ಇದಕ್ಕಿಂತ ಉತ್ತಮವಾದದ್ದು ಬೇರೇನಿದೆ? ಹೀಗೆಂದು ಯೋಚಿಸಿ ಬಾಪೂ ಅವರು ಹರಿಲಾಲನ ಪತ್ರಕ್ಕೆ ಉತ್ತರಿಸಿದ್ದರು.

(ಸಶೇಷ)